‘ನನ್ನ ಒತ್ತಡಕ್ಕೆ ನಾನೇನು ಮಾಡಲಿ...? ಈ ಬೆಟ್ಟದ ಮೇಲೆ ನಿಂತುಕೊಂಡು ಕೆಳಗಿನ ಮೈಸೂರಿನ ಜನರಿಗೆಲ್ಲಾ ಕೇಳಿಸುವಂತೆ ನನ್ನಲ್ಲಿ ಆಗುತ್ತಿರುವ ಹಿಂಸೆ ಬಗ್ಗೆ ಕಿರುಚಿ ಹೇಳಿಬಿಡಲಾ?’ ಹಾಗೆ ಮಾಡಿದ್ದಲ್ಲಿ ಅವನ ಜೀವನದಲ್ಲಿ ಸಂಗ್ರಹ ಮಾಡಿಕೊಂಡು ಬಂದಿದ್ದ ಒಳ್ಳೆ ಹೆಸರಿನ ಮೌಲ್ಯವೇ ಸತ್ತುಹೋಗುತ್ತದೆ. ಜನರ ನಾಲಿಗೆ ನಲಿದು, ಚಪ್ಪರಿಸಿಕೊಳ್ಳುತ್ತದೆ! ಇದೇ ಆದರ್ಶ ವ್ಯಕ್ತಿ ಎಂದು ಹೊಗಳಿ ಹಾಡುವ ವ್ಯಕ್ತಿಯು ಮೇಲೆ ಕಾಣುವಷ್ಟು ಒಳ್ಳೆತನವಾಗಿ ಒಳಗಿಲ್ಲ. ಮೋಸಗಾರ ಒಳಗೆ ಹುಳು ಅಡಗಿಸಿಕೊಂಡು ಮೇಲೆ ಬಂಗಾರ ಬಣ್ಣದಲ್ಲಿ ಹೊಳೆವ ಹುಳು ಹಿಡಿದ ಮಾವಿನ ಹಣ್ಣಿನಂತೆ ಮೋಸದ ಹೊರನೋಟ!’

ಪ್ರಸಾದ ಸಂಪ್ರದಾಯ ಬದ್ಧನಾಗಿ ಬೆಳೆದ, ಆಧುನಿಕ ಯುಗದಲ್ಲೂ ವೈದಿಕ ಆಚರಣೆ ಅನುಕರಿಸುವವ ನಾಗರೀಕ, ತಲೆಯ ಜುಟ್ಟು ತೆಗೆದವನಲ್ಲ, ಹಣೆ ಬೋಳು ಬಿಟ್ಟವನಲ್ಲ. ಸಂಧ್ಯಾವಂದನೆ ಮಾಡುವ ಸಂಸ್ಕೃತ ಪಂಡಿತ. ಒಳ್ಳೆ ವಾಗ್ಮಿ ಮತ್ತು ಪ್ರವಚನಕಾರ. ಬಾಳಲ್ಲಿ ಹೀಗೆ ಇರಬೇಕು, ಹೀಗೆ ಮಾಡಬಾರದು ಎಂಬ ಕಲ್ಲು ಇಟ್ಟಿಗೆಗಳನ್ನು ಜೋಡಿಸಿದ ಭದ್ರಕೋಟೆಯಲ್ಲಿ ಬೆಳೆದು ಸುರಕ್ಷಿತ ನೆಲೆಯಲ್ಲಿ ನಿಂತವ. ಅವನು ಕಾಲೇಜಲ್ಲಿ ಓದುತ್ತಿರುವಾಗ ಸಹಪಾಠಿಗಳಲ್ಲಿ ಕೆಲವರು ಹುಡುಗಿರೊಡನೆ ಪ್ರೇಮಪ್ರಸಂಗ ನಡೆಸಿದಾಗ, ಆ ಬಗ್ಗೆ ಕುತೂಹಲ ತೋರಿಸದೆ ತನ್ನ ಪಾಡಿಗೆ ತಾನಿದ್ದ. ಸಂಸ್ಕೃತದ ಕಾಳಿದಾಸ ಓದುವಾಗ ರಸಿಕತೆ ಪ್ರಸಂಗ ಬಂದಾಗ ಒಳಗೊಳಗೇ ನಾಚಿಕೊಳ್ಳುತ್ತಿದ್ದ. ಆದರೆ ಆ ಓದು ಇವನಿಗೆ ಸೌಂದರ್ಯೋಪಾಸನೆ ಅರಳಿಸಿತ್ತು. ಮುಂದೆ ಅವನು ವೇದ, ಉಪನಿಷತ್ತು, ಇತಿಹಾಸ, ಪುರಾಣ ಎಲ್ಲ ಓದುವಾಗ ಅವನ ಸೌಂದರ್ಯ ಉಪಾಸನೆ ಮೇಲೇ ಭಾರ ಬಿದ್ದಿತ್ತು. ಆದರೂ ಅದು ನಲುಗಿ ಹೋಗಲಿಲ್ಲ. ಬದಲಾಗಿ ದೈಹಿಕ ತೃಷೆಯ ಜಲ ಅವನೊಳಗೆ ಇದ್ದದ್ದು ಅವನೇ ಅರಿತಿರಲಿಲ್ಲ. ಅಂತರ್ ಮುಖಿಯಾಗಿ ತನ್ನ ಅಭ್ಯಾಸ, ದಿನಚರಿ ಕಾರ್ಯಗಳನ್ನು ಮಾಡುವಾಗಲೂ ಅವನಿಗೆ ಎಂದೂ ದೈಹಿಕ ತೃಷೆಯು ತನ್ನ ಮೇಲಿನ ಭಾರವನ್ನೆಲ್ಲಾ ಸೀಳಿಕೊಂಡು ಮೇಲೆದ್ದು ಬಂದು ತನ್ನ ಸಂಯಮವನ್ನು ಸೋಲಿಸಿ ಬಿಡುವುದು ಎಂದು ಅಂದುಕೊಂಡಿರಲಿಲ್ಲ. ಕೆಲವೇ ನಿಮಿಷಗಳ ಕಾಲ ಅವನು ವರ್ಷಾನುಗಟ್ಟಲೆ ಪೋಷಿಸಿಕೊಂಡು ಬಂದಿದ್ದ ಸಂಯಮದ ಮೌಲ್ಯವನ್ನು ಕೊಚ್ಚಿಬಿಟ್ಟಿತು. ತಾನು ತಪ್ಪು ಮಾಡಿದರ ಪಶ್ಚಾತ್ತಾಪ ತಕ್ಷಣದಿಂದಲೇ ಎದೆ ಚುಚ್ಚತೊಡಗಿತು. ಮುಂದಿನ ಪರಿಣಾಮ ನೆನೆದು ಕಂಗಾಲಾದ.

ಕಟ್ಟುಪಾಡಿಲ್ಲದ ಸ್ವತಂತ್ರವಾಗಿ ಅವನ ಇಚ್ಛೆಯಂತೆಯೇ ತಂದೆ ತಾಯಿ ಬೆಳೆಸಿ ಬಿಟ್ಟಿದ್ದರೆ ಅವನಿಗೆ ಕೆಟ್ಟ ಧೈರ್ಯ ಇದ್ದು, ದಿಕ್ಕರಿಸಿ ತನ್ನ ಒರಟು ದಿಟ್ಟತನದಿಂದ ಸಮಾಜವನ್ನು ಎದುರಿಸಿ ನಿಂತು ಬಿಡುತ್ತಿದ್ದನೊ ಏನೊ. ಈಗ ಹಾಗಾಗಲು ಸಾಧ್ಯವಿರಲಿಲ್ಲ. ಕೆಲವೊಮ್ಮೆ ಕ್ಷುಲ್ಲಕ ವಿಷಯಗಳಲ್ಲಿ ಮೇಲ್ವದರರ ಸ್ವಾತಂತ್ರ ತೆಗೆದುಕೊಳ್ಳುತ್ತಿದ್ದನೇ ಹೊರತು, ಬೇರಿನ ಮೂಲದಲ್ಲಿ ಅವನು ತಾಯಿ ತಂದೆ, ಸಮಾಜಕ್ಕೆ ಹೆದರಿಯೇ ನಡೆದುಕೊಳ್ಳುತ್ತಿದ್ದ. ಅವನು ಬೆಳೆದು ರೂಢಿಸಿಕೊಂಡಿದ್ದ ಸಂಸ್ಕಾರದಲ್ಲಿ ತಾನು ಚೆನ್ನಾಗಿ ಕಟ್ಟುಪಾಡಿನ ಚೌಕದಲ್ಲಿ ಬಾಳಬೇಕು, ಬದುಕಿನ ಆಚೆಗೂ ಒಂದು ಬದುಕಿದೆ. ಆ ಬದುಕಿಗೆ ಇಂದು ಹೇಗೆ ಬದುಕುತ್ತೇವೆ ಎಂಬುದರಿಂದ ಮೌಲ್ಯ ಬರುತ್ತದೆ. ಈಗ ಒಳ್ಳೆ ರೀತಿ ಬಾಳ್ವೆ ಮಾಡಿದರೆ ಮುಂದೆ ಅದಕ್ಕೆ ತಕ್ಕ ಫಲ ಇರುತ್ತದೆ. ಈಗ ಕೆಟ್ಟದ್ದು ಮಾಡಿದರೆ ಮುಂದೆಯೂ ಕೆಟ್ಟದಾದ ಬಾಳು ಕಟ್ಟಿಟ್ಟ ಬುತ್ತಿ ಎಂದೆಲ್ಲಾ ಅವನು ಕಲಿಕೆಯಿಂದ ನಂಬಿ ಬೆಳೆದು ಬಿಟ್ಟಿದ್ದ. ತಾನು ಉಚ್ಚ ಜಾತಿಯವನು ಎಂದು ಹುಟ್ಟಿದ ಕ್ಷಣದಿಂದ ಅವನಿಗೆ ತಲೆ ತುಂಬಿಸಲು ಆಚರಣೆಗಳನ್ನು ಮಾಡುತ್ತಿದ್ದರು. ಸಾತ್ವಿಕ ಆಹಾರ, ಸಾತ್ವಿಕ ನಡೆ–ನುಡಿ, ಅನಾರ್ಯವಾದದ್ದನ್ನು ಮಾಡದೇ, ಸ್ಮೃತಿ–ಶ್ರುತಿ–ಕೃತಿಗಳಿಂದ ತಾನೂ ತನ್ನನ್ನು ಸುಧಾರಿಸಿಕೊಂಡು, ಇತರರಿಗೂ ಅದನ್ನೇ ಬೋಧಿಸುತ್ತಾ ಬಂದಿದ್ದ. ಈಗ ಅದೆಲ್ಲಾ ಮಾಯೆಯಲ್ಲಿ ಮಾಯವಾಗಿಬಿಟ್ಟಿತು. ಸಹಜ ಸೌಂದರ್ಯದಿಂದ ಆಕರ್ಷಿತನಾದಾಗ ಅವನ ಸಂಸ್ಕಾರ ತನ್ನ ಶುಚಿತ್ವ ಎಲ್ಲ ಕೊಚ್ಚಿಸಿಕೊಂಡು ಅಲ್ಲಿ ಅಡಗಿ ಕುಳಿತಿದ್ದ ಕಾಮವೇ ವಿಜೃಂಭಿಸಿಬಿಟ್ಟಿತು.

ಮುಳುಗಿದವರು

ಓದುಗ ಹೇಳಿದ
ಪುಸ್ತಕದಿ ಮುಳುಗಿರುವೆ
ಹಾಸ್ಯ ಕವಿ ಹೇಳಿದ;
‘ಪುಸ್ತಕ ಪ್ರಕಟಿಸಿ ಮುಳುಗಿರುವೆ’

★ ಫಾಲನೇತ್ರ ಸಜ್ಜನ


ವಿಜಯ

ಪ್ರಸಾದ ಸೋತುಬಿಟ್ಟ. ಕ್ಷಣದಲ್ಲಿ ಪ್ರಸಾದ ಬೇರೆಯೇ ಆಗಿಬಿಟ್ಟ ತನ್ನ ಬದಲಾವಣೆಯನ್ನು ತೋರ್ಪಡಿಸುವ ಧೈರ್ಯವೂ ಬರಲಿಲ್ಲ. ಯಾರನ್ನೂ ಎದುರಿಸಲು ಶಕ್ತಿ ಇರದೆ, ಒಳಗಿದ ಕರಗುತ್ತಾ ಹೋಗಿಬಿಟ್ಟು ಇದಕ್ಕೆ ಪ್ರಾಯಶ್ಚಿತ್ತವೇನು ಎಂಬುದು ಯಕ್ಷ ಪ್ರಶ್ನೆಯಾಗಿ ಸಿಕ್ಕಿ ಹಾಕಿಕೊಂಡಿತು. ಅವನ ಮನಸ್ಸು ಹೇಳಿತು, ‘ದುಶ್ಚರಿತದಿಂದ ಆದ ಈ ಪಾಪಕಾರ್ಯ ಪೂರ್ವಜನ್ಮದ ಕರ್ಮಫಲದಿಂದಲೇ ಆಗಿರಬೇಕು! ಇದರ ಫಲ ನರಕಸ್ಥಿತಿ. ಅದನ್ನು ಇಲ್ಲೇ ಅನುಭವಿಸಬೇಕಾಗುತ್ತೆ!’ ಅವನ ಪ್ರಾಯಶ್ಚಿತ್ತ ಅವನದೇ ನರಕ ಸ್ಥಿತಿಯ ಮನೋವೇದಿಕೆ ಮೇಲೆ ನಡೆಯುತ್ತಾ ಹೋಗುತ್ತಿತ್ತು. ಯಾತನೆ ಯಾರಿಗೂ ತೋರಿಸದೆ ತಾನೊಬ್ಬನೇ ನೋವು ಅನುಭವಿಸುತ್ತಾ ದಿನ ದೂಡುತ್ತಿದ್ದ.

ಈ ಏಕೈಕ ಘಟನೆ ನಿಮಿಷ ಮಾತ್ರದ್ದಾದರೂ ಪ್ರಸಾದನ ಸುಖವನ್ನೆಲ್ಲಾ ಸೂರೆ ಮಾಡಿ ತೆಗೆದುಕೊಂಡು ಹೋಗಿಬಿಟ್ಟಿತು. ಬರಿಗಾಲಲ್ಲಿ ಮುಳ್ಳು ಪೊದೆ ಮೇಲೆ ನಡೆದಂತೆ ಓಡಾಡುತ್ತಿದ್ದ. ಕಾಲು ಚುಚ್ಚಿ ರಕ್ತ ಬರುತ್ತಿದ್ದರೆ ತನ್ನ ತಪ್ಪಿಗೆ ಇದೇ ಶಿಕ್ಷೆ ಎಂದುಕೊಂಡ.

ಜನ ತನ್ನ ಹೊಸ ಕಪಟ ಜೀವನ ಗುರುತಿಸಿಲ್ಲವಾದರೂ ತಪ್ಪು ಮಾಡಿದವನನ್ನು ಮನಸ್ಸು ಚುಚ್ಚಿ ಚುಚ್ಚಿ ಬಾಧಿಸುತ್ತಿದ್ದದ್ದು ನಡದೇ ಇತ್ತು. ಪುರಂದರ ದಾಸರು ಅಂದಂತೆ.

‘ಗೂಟು ನಾಮವ ಹೊಡೆದು, ಗುಂಡು ತಂಬಿಗೆ ಹಿಡಿದು
ಚೋಟಂಚು ಧೋತರ ಮಡಿಯುಟ್ಟು
ದಾಟು ಕಾಲಿಡುತ ನಾ ಧರೆಯೊಳಗೆ ಬಂದರೇನ್ನ
ಜೂಟಿಕತನ ನೋಡಿ ಭ್ರಮಿಸದಿರಿ ಜನರೇ1
ತನ್ನನ್ನು ತಾನೇ ಜರಿದುಕೊಳ್ಳುತ್ತಿದ್ದ.

ಸತ್ಯ ತಿಳಿದರೆ ಈಗ ಹೊಗಳುತ್ತಿರುವವರೆಲ್ಲಾ ಬೀದಿ ಹುಚ್ಚುನಾಯಿಯಂತೆ ತನ್ನ ಮೇಲೆ ಅಪಮಾನದ ಕಲ್ಲುಗಳನ್ನು ಎಸೆಯುವರು. ತನ್ನ ಉಚ್ಚ ಜಾತಿ, ಉಚ್ಚಮಟ್ಟದ ವಿದ್ಯೆ, ಉನ್ನತ ಮಟ್ಟದ ವೈಚಾರಿಕತೆ ಯಾವುದಕ್ಕೂ ಒಂದು ಚಿಕ್ಕಾಸಿನ ಬೆಲೆ ಕೂಡ ಇಡುವುದಿಲ್ಲ. ಸಮಾಜದಲ್ಲಿ ಆದರ್ಶದ ವ್ಯಕ್ತಿ ಕ್ಷಣ ಮಾತ್ರದಲ್ಲಿ ಬಣ್ಣ ಕೆಡಿಸಿಕೊಂಡುಬಿಟ್ಟಿದ್ದ. ಈಗ ನೆನೆಸಿಕೊಂಡರೂ ಅವನಿಗೆ ಅಸಹ್ಯವಾಗುವುದು, ದೇವರಿಗೆ ಪವಿತ್ರ ಅಭಿಷೇಕ ಮಾಡುವ ತಾನು ಕೊಳಚೆ ನೀರಲ್ಲಿ ಹೇಗೆ ತಾನೇ ಈಜಾಡಿದೆ? ತನ್ನ ಅಭಿರುಚಿ, ಶುಚಿ, ಸಂಸ್ಕಾರ ಹೇಗೆತಾನೇ ಇದಕ್ಕೆ ಅವಕಾಶ ಮಾಡಿ ಕೊಟ್ಟಿತು...?

ಕೃತ್ಯದ ಫಲ ಎದೆಚುಚ್ಚುತ್ತಿದೆ. ನೋವು ಸಹಿಸಲಾಗಲಿಲ್ಲ.

ಆ ದಿನ ಪ್ರಸಾದನಿಗೆ ಎಲ್ಲಿಯದೊ ಒಂದು ಕಬ್ಬಿಣದ ದಪ್ಪ ತಂತಿ ಕಾಲಿಗೆ ತೊಡರಿಸಿಕೊಂಡಿತು. ಬಹುಶಃ ದೇವಸ್ಥಾನದ ಛತ್ರ ಕಟ್ಟುವಾಗ ಬಳಸಿದ್ದ ‘ಬೈಂಡಿಂಗ್ ವೈರ್’ ಇರಬಹುದು. ಅದನ್ನು ಕೈಗೆತ್ತಿಕೊಂಡು ಏನೊ ಆಕೃತಿ ಮೂಡಿಸಿದ. ನಂತರ ಅದನ್ನು ಜೋಪಾನವಾಗಿ ತನ್ನ ಮಡಿ ಬಟ್ಟೆ ಮೇಲೆ ಸ್ನಾನದ ಮನೆಯಲ್ಲಿಟ್ಟ. ಸ್ನಾನಕ್ಕಿಳಿದಾಗ ಬಚ್ಚಲೊಲೆಯಲ್ಲಿ ಧಗ ಧಗ ಉರಿಯುತ್ತಿದ್ದ ಬೆಂಕಿ ನೋಡಿದ. ಸ್ನಾನ ಮುಗಿಸಿ ಆ ಕಬ್ಬಿಣದ ಕಂಬಿಯನ್ನು ಬೆರಳು ಸುಡದಂತೆ ತನ್ನ ಟವಲ್‌ನಿಂದ ಹಿಡಿದುಕೊಂಡು ಕಂಬಿಯನ್ನು ಚೆನ್ನಾಗಿ ಕೆಂಪಾಗುವಂತೆ ಕಾಯಿಸಿದ. ಅದು ಕೆಂಡದಂತೆ ಕೆಂಪಾಗಿ ಅವನು ಮಾಡಿದ್ದ ಆಕೃತಿಯೂ ಸ್ಪಷ್ಟವಾಗಿ ಕಂಡದ್ದನ್ನು ನೋಡುತ್ತಲೇ ಎದೆ ಮೇಲೆ ಚೆನ್ನಾಗಿ ಒತ್ತಿಕೊಂಡುಬಿಟ್ಟ. ಸುಟ್ಟ ಚರ್ಮ ವಿಪರೀತ, ತಡೆಯಲಾರದ ಉರಿಕೊಟ್ಟರೂ, ಹಲ್ಮುಡಿ ಕಚ್ಚಿ ತಡೆದುಕೊಂಡ. ಸರಳನ್ನು ನೀರಲ್ಲಿ ಅದ್ದಿ ಅಟ್ಟಕ್ಕೆ ಬಿಸಾಕಿದ.

ಈಗ ಸ್ವಲ್ಪವಾದರೂ ಮನಸ್ಸಿಗೆ ಶಾಂತಿ ದೊರಕಿತು.

ಅಂದಿನಿಂದ ನಿತ್ಯ ಹೊದೆಯುತ್ತಿದ್ದ ಶಲ್ಯ ಎದೆ ಭಾಗವನ್ನು ಸದಾಕಾಲ ಮುಚ್ಚಿಕೊಂಡಿರುತ್ತಿತ್ತು. ಪ್ರಸಾದ, ಒಂದು ಕ್ಷಣವೂ ಅಜಾಗರೂಕತೆಯಿಂದ ತನ್ನ ಎದೆ ತೆರೆದು ಕಾಣುವಂತೆ ಮಾಡಲಿಲ್ಲ!

ಅವನೀಗ ಔಷಧಿ ತೆಗೆದುಕೊಳ್ಳಲು ಶಿವಣ್ಣನ ಬಳಿ ಹೋಗುವುದು ನಿಲ್ಲಿಸಿದ!

* * *